# Anti Land-Grabbing Action Committee
# ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ

No. 759, 5th Main, 8th Cross, R.T.Nagar, II Block, Bangalore 560032 Ph: 094481 20305
Website : http://savekarnataka.in email: karnatakasave@gmail.com


---

ದಿನಾಂಕ: **03/03/2015**

ಗೆ,
ಸನ್ಮಾನ್ಯ ಶ್ರೀ ಸಿಧ್ದರಾಮಯ್ಯನವರು,
ಗೌರವಾನ್ವಿತ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು.

ಸನ್ಮಾನ್ಯರೇ,

ಶಾಂತಿನಗರ ಗೃಹನಿರ್ಮಾಣ ಸಹಕಾರ ಸಂಘಕ್ಕೆ ಸೇರಿದ 66 ಎಕರೆ 22 ಗುಂಟೆ ಪ್ರದೇಶವು ಅಕ್ರಮವಾಗಿ ಭೂಮಾಫಿಯಾದವರ ಪಾಲಾಗಿದ್ದು, ಅದನ್ನು ಸರ್ಕಾರದ ವಶಕ್ಕೆ ಪಡೆದು, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ತಮಗೆ ದಿನಾಂಕ 13/10/2014, 29/11/2014 ಮತ್ತು 14/2/2015ರಂದು ಪತ್ರಗಳನ್ನು ಬರೆದು ವಿನಂತಿಸಿದ್ದೆವು. ದಿನಾಂಕ 7/1/2015 ಮತ್ತು 2/3/2015ರಂದು ಮಾನ್ಯ ಸಹಕಾರ ಸಚಿವರನ್ನು ಭೇಟಿ ಮಾಡಿ, ಅಕ್ರಮವಾಗಿರುವ ಬಗ್ಗೆ ಚರ್ಚಿಸಲಾಗಿದೆ. ಆದರೆ ಬೇನಾಮಿ ಹೆಸರುಗಳಲ್ಲಿ ಅಕ್ರಮವಾಗಿರುವ ಬಗ್ಗೆ ದಾಖಲೆ ಸಮೇತ ಮಾಹಿತಿ ನೀಡಿದ್ದರೂ, ಅಕ್ರಮ ನಡೆದಿರುವುದು ನೂರುಕ್ಕೆ ನೂರು ಸ್ಪಷ್ಟವಾಗಿದ್ದರೂ, ಈ ಬೆಲೆಬಾಳುವ ಸರ್ಕಾರದ ಆಸ್ತಿ ರಕ್ಷಿಸುವ ಬಗ್ಗೆ ಯಾವುದೇ ಕ್ರಮಗಳಾಗಿರುವುದಿಲ್ಲ.

ಹಂಚಿಕೆ ನಿಯಮಗಳನ್ನು ಉಲ್ಲಂಘಿಸಿ, ಒಂದೊಂದು ಕುಟುಂಬಕ್ಕೂ ನಾಲ್ಕಾರು ನಿವೇಶನಗಳನ್ನು ಹಂಚಿ, ನಂತರ ಜಿ.ಪಿ.ಎ. ಮೂಲಕ 143 ನಿವೇಶನಗಳನ್ನು ಒಂದೇ ಕುಟುಂಬಕ್ಕೆ ಮಾರಾಟ ಮಾಡಲಾಗಿರುತ್ತದೆ. ಇವೆಲ್ಲವೂ ಭೂಗಳ್ಳರ ಪೂರ್ವ ನಿರ್ಧಾರಿತ ಕ್ರಮಗಳಾಗಿರುತ್ತವೆ. ಬೇನಾಮಿ ಹೆಸರುಗಳಿಗೆ ನಿವೇಶನಗಳನ್ನು ಹಂಚಿದಂತೆ ಮಾಡಿ, ಅತ್ಯಂತ ಬೆಲೆ ಬಾಳುವ ಭೂಮಿಯನ್ನು ಭೂಗಳ್ಳರು ನುಂಗಿ ನೀರು ಕುಡಿದಿರುತ್ತಾರೆ.

ಕರ್ನಾಟಕ ಉಚ್ಚನ್ಯಾಯಾಲಯವು 2007ರಲ್ಲಿ ತೀರ್ಪಿತ್ತು, ಸಂಘಕ್ಕೆ ಭೂಸ್ವಾಧೀನವಾದಾಗ (1983) ಮತ್ತು ಬಡಾವಣೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ದೊರೆತ ಸಂದರ್ಭದಲ್ಲಿ (1987) ಇದ್ದ ನೈಜ ಸದಸ್ಯರುಗಳಿಗೆ ನಿವೇಶನ ಹಂಚಿಕೆ ಮಾಡುವಂತೆ ಆದೇಶಿಸಿತ್ತು. ಆದರೆ, 2004ರಲ್ಲಿ , ಸಂಘವು ನಿವೇಶನ ಹಂಚಿಕೆ ಮಾಡಿದ ಸಂದರ್ಭದಲ್ಲಿ, 18, 20, 21, 22ರ ವಯಸ್ಸಿನವರಿಗೂ ಬಹಳಷ್ಟು ನಿವೇಶನಗಳು ಹಂಚಿಕೆಯಾಗಿರುತ್ತವೆ. 1983 ಮತ್ತು 1987ರಲ್ಲಿ

ಹುಟ್ಟಿಯೇ ಇಲ್ಲದಿದ್ದ ಕೆಲವರಿಗೆ ಹೇಗೆ ನಿವೇಶನ ಹಂಚಿಕೆಯಾದವು? ಇವು ನ್ಯಾಯಾಲಯದ ತೀರ್ಪಿನ ಉಲ್ಲಂಘನೆಯಲ್ಲವೇ?

ನಾವು ಈಗಾಗಲೇ ಹಿಂದಿನ ಪತ್ರದಲ್ಲೇ ತಿಳಿಸಿರುವಂತೆ, ಶಾಂತಿನಗರ ಗೃಹನಿರ್ಮಾಣ ಸಹಕಾರ ಸಂಘದ ಅವ್ಯವಹಾರದ ಬಗ್ಗೆ ಸಹಕಾರ ಸಂಘಗಳ ನಿಬಂಧಕರ ಕಚೇರಿಯಿಂದ ಹಲವಾರು ಪತ್ರಗಳನ್ನು ಬರೆದು, ಸಂಘದ ಬಗ್ಗೆ ಪ್ರತ್ಯೇಕ ವಿಚಾರಣೆ ನಡೆಸುವುದಾಗಲೀ ಅಥವಾ ಆಡಳಿತಾಧಿಕಾರಿಗಳನ್ನು ನೇಮಕಾತಿ ಮಾಡುವುದಾಗಲೀ ಈ ಹಂತದಲ್ಲಿ ಸೂಕ್ತವಲ್ಲವೆಂದು ನಿಬಂಧಕರು ಅಭಿಪ್ರಾಯ ಪಟ್ಟಿರುತ್ತಾರೆ. ಸಂಘದಲ್ಲಿ ನೈಜ ಸದಸ್ಯರುಗಳ ಸಂಖ್ಯೆ ಬಹಳ ವಿರಳವಾಗಿದ್ದು , ಈ ಆಸ್ತಿಯನ್ನು ಸಂರಕ್ಷಿಸುವುದು ಮತ್ತು ಸದಸ್ಯರುಗಳಿಗೆ ನಿವೇಶನಗಳನ್ನು ವಿತರಿಸುವ ಅಂಶವು ಸಂಘಕ್ಕೆ ನಿಲುಕದ ಸಂಗತಿಯಾಗಿರುವುದರಿಂದ, ಸದರೀ ಬೆಲೆಬಾಳುವ ನಗರದ ಮಧ್ಯಭಾಗದಲ್ಲಿರುವ ಜಮೀನನ್ನು ಸಂರಕ್ಷಿಸಿ, ಸಾರ್ವಜನಿಕರಿಗೆ ಉಪಯೋಗವಾಗುವ ರೀತಿಯಲ್ಲಿ ಸರ್ಕಾರದ ಉನ್ನತ ಮಟ್ಟದಲ್ಲಿ ಕ್ರಮಕೈಗೊಳ್ಳಬೇಕೆಂದು ಸಹಕಾರ ಸಂಘಗಳ ನಿಬಂಧಕರು ಹಲವಾರು ಪತ್ರಗಳನ್ನು 2011ರವರೆವಿಗೂ ಕೂಡ ಬರೆದು ಸರ್ಕಾರಕ್ಕೆ ಮಾಹಿತಿ ನೀಡಿರುತ್ತಾರೆ. ಹೀಗಿರುವಾಗ, ಸರ್ಕಾರದ ಮಟ್ಟದಲ್ಲಿ ಕ್ರಮ ಕೈಗೊಳ್ಳದೆ , ಈಗಲೂ ಪದೇ ಪದೇ ಸಹಕಾರ ಸಂಘಗಳ ನಿಬಂಧಕರಿಂದಲೇ ಮಾಹಿತಿ ಕೇಳುತ್ತಿರುವುದು ಅಕ್ರಮವನ್ನು ತಳ್ಳಿ ಹಾಕುವ ಪ್ರಯತ್ನವಾಗಿರುತ್ತದೆ. ಈಗಾಗಲೇ ತಡವಾಗಿರುವುದರಿಂದ, ಇನ್ನಾದರೂ ಇದರ ಬಗ್ಗೆ ಗಮನ ಹರಿಸಿ, ತುರ್ತಾಗಿ ಕ್ರಮ ತೆಗೆದುಕೊಳ್ಳಬೇಕಾದ ಅವಶ್ಯಕತೆಯಿದೆ.

ಸರ್ಕಾರದ / ಸಾರ್ವಜನಿಕರ ಆಸ್ತಿಯನ್ನು ರಕ್ಷಿಸಬೇಕಾದ ದೊಡ್ಡ ಜವಾಬ್ದಾರಿ ತಮ್ಮ ಮೇಲಿದೆ. ನಗರದ ಮಧ್ಯಬಾಗದಲ್ಲಿರುವ ಅತ್ಯಂತ ಬೆಲೆಬಾಳುವ ಆಸ್ತಿ ಭೂಗಳ್ಳರ ಪಾಲಾಗಿದೆ. ಆಸ್ತಿಯ ಮೌಲ್ಯ ಕನಿಷ್ಠ ಮೂರು ಸಾವಿರ ಕೋಟಿ (3000 crores) ರೂಪಾಯಿಗಳು. ಇದು ಶಾರದ ಚಿಟ್ ಫಂಡ್ ಹಗರಣಕ್ಕಿಂತಲೂ ದೊಡ್ಡ ಹಗರಣವಾಗಿದ್ದು, ಅನೇಕ ಬಾರಿ ಸರ್ಕಾರದ ಗಮನಕ್ಕೆ ತಂದಿದ್ದರೂ, ಕ್ರಮ ಕೈಗೊಳ್ಳದಿರುವುದು ದುರದೃಷ್ಟಕರ ಸಂಗತಿಯಾಗಿರುತ್ತದೆ. ಆದುದರಿಂದ ಸರ್ಕಾರದ ಆಸ್ತಿಯನ್ನು ರಕ್ಷಿಸಲು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ನಾವೆಲ್ಲಾ ಮತ್ತೊಮ್ಮೆ ತಮ್ಮನ್ನು ಒತ್ತಾಯಪೂರ್ವಕವಾಗಿ ವಿನಂತಿಸುತ್ತೇವೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿಗಳು

(ಗೌರವಾಧ್ಯಕ್ಷರಾದ ಡಾ. ಎಚ್.ಎಸ್.ದೊರೆಸ್ವಾಮಿ, ಸಂಚಾಲಕರಾದ ಶ್ರೀ. ಎ.ಟಿ.ರಾಮಸ್ವಾಮಿ, ಜಸ್ಟೀಸ್ ಶ್ರೀ. ಸಂತೋಷ್ ಹೆಗ್ಡೆ ಹಾಗೂ ಇನ್ನೂ 15 ಗಣ್ಯರ ಸಹಿಯೊಂದಿಗೆ ಗೌರವಾನ್ವಿತ ಮುಖ್ಯಮಂತ್ರಿಗಳಿಗೆ ತಲುಪಿಸಲಾಗಿದೆ)